## ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.

**ಸಿಸಿ: 1517/2022**

| | | |
|---|---|---|
| **ಪಿರ್ಯಾದುದಾರರು** | ಃ | ನಿಂಗೇಗೌಡ ಬಿನ್ ಲೇಟ್ ದೊಡ್ಡಲಿಂಗೇಗೌಡ,<br>45 ವರ್ಷ,<br>ವಾಸಃ ದ್ಯಾವಪಟ್ಟಣ ಗ್ರಾಮ,<br>ಅರಳಾಳುಸಂದ್ರ ಪೋಸ್ಟ್,<br>ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ. |
| | | -ವಿರುದ್ಧ- |
| **ಆರೋಪಿ** | ಃ | ಮಂಜುನಾಥ ಬಿ.ಕೆ. ಬಿನ್ ಕೆಂಪೇಗೌಡ,<br>45 ವರ್ಷ,<br>ವಾಸ ಃ ಹೆಚ್ ಬ್ಯಾಡರಹಳ್ಳಿ ಗ್ರಾಮ,<br>ಮಂಕುಂದ,<br>ರಾಮನಗರ ತಾಲ್ಲೂಕು,<br>ರಾಮನಗರ ಜಿಲ್ಲೆ.<br><br>ವ್ಯಾಪಾರ ಸ್ಥಳ ಃ<br>ಅಚ್ಚು ಲೇಡೀಸ್ ಫ್ಯಾಷನ್ ಡಿಸೈನರ್,<br>ಸಾತನೂರು ರಸ್ತೆ,<br>ಲಾಳಘಟ್ಟ ಸರ್ಕಲ್, ಮಿಲ್ಕ್ ಡೈರಿ ಹತ್ತಿರ,<br>ಕನಕ ನಗರ, ಚನ್ನಪಟ್ಟಣ. |

### ದಂಡ ಪ್ರಕ್ರಿಯಾ ಸಂಹಿತೆ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ

1. ನೀವು ಫಿರ್ಯಾದುದಾರ ಪರ ಸಾಕ್ಷ್ಯ ನುಡಿದಿರುವುದನ್ನು ಕೇಳಿರುವಿರಾ?
   ಉತ್ತರ ಃ

2. ಫಿರ್ಯಾದುದಾರರಾದ ಶ್ರೀ ನಿಂಗೇಗೌಡ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಿಚಯಸ್ಥರಾಗಿರುತ್ತೀರಿ, ಈ ಪರಿಚಯದ ಮೇರೆಗೆ ಆರೋಪಿಯಾದ ನೀವು ತನ್ನ ಫ್ಯಾಷನ್ ಡಿಸೈನರ್ ಅಂಗಡಿ ಅಭಿವೃದ್ಧಿ ಮಾಡುವ ಸಲುವಾಗಿ

ಸಾಲ ಕೇಳಿದ್ದು, ಪಿರ್ಯಾದುದಾರರು ನಿವೇಶನ ಖರೀದಿಸುವ ಸಲುವಾಗಿ ಕೂಡಿಸಿ ಇಟ್ಟಿದ್ದ ರೂ.**4,00,000/-** ಗಳನ್ನು ನಿಮಗೆ ಸಾಲವಾಗಿ ನೀಡಿದ್ದು ಹಾಗೂ ದಿಃ **12.05.2020** ರಂದು ಪಿರ್ಯದುದಾರರು ಸಾಲವಾಗಿ ಪಡೆದಿದ್ದ ರೂ.**2,00,000/-** ಗಳನ್ನು , ದಿಃ **22.09.2020** ರಂದು ತನ್ನ ಅಣ್ಣನಿಂದ ಪಡೆದಿದ್ದ ರೂ.**3,00,000/-** ಗಳನ್ನು ಹೀಗೆ ಒಟ್ಟು ರೂ.**9,00,000/-** ಗಳನ್ನು ಸಾಲವಾಗಿ ಅವರಿಂದ ಪಡೆದಿರುತ್ತೀರಿ. ಹಾಗೂ ಸದರಿ ಹಣವನ್ನು ಪಿರ್ಯಾದುದಾರರಿಗೆ ಒಂದು ವರ್ಷದ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ**?**

ಉತ್ತರಃ

3. ಫಿರ್ಯಾದುದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತದನಂತರ ಅವರು ಆರೋಪಿಯಾದ ನಿಮ್ಮನ್ನು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ಸದರಿ ಹಣದ ಮರುಪಾವತಿಗೆ ಚನ್ನಪಟ್ಟಣದ ಶಾಖೆಯ ಐ.ಸಿ.ಐ.ಸಿ.ಐ ಚೆಕ್ ಸಂಖ್ಯೆಃ002748 ಅನ್ನು ರೂ.**9,00,000/-** ಗಳನ್ನು ದಿನಾಂಕಃ 08.03.2022 ಎಂದು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿ ನಗದೀಕರಣಗೊಳಿಸಿ ಕೊಳ್ಳುವಂತೆ ಹೇಳಿರುತ್ತೀರಿ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

4. ಫಿರ್ಯಾದುದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪಿರ್ಯಾದುದಾರರು ನೀವು ಕೊಟ್ಟ ಚೆಕ್ಕನ್ನು ಪಿರ್ಯಾದುದಾರರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಕರ್ನಾಟಕ ಬ್ಯಾಂಕ್ ಗೆ ಅಂದರೆ ದಿನಾಂಕಃ 08.03.2022 ರಂದು ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು "**INSUFFICIENT FUND**" ಎಂಬ ಹಿಂಬರಹದೊಂದಿಗೆ

ಚೆಕ್‌ನ್ನು ದಿನಾಂಕಃ**14.03.2022** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಈ ವಿಷಯವನ್ನು ಪಿರ್ಯಾದುದಾರರು ನಿಮಗೆ ತಿಳಿಸಿದ್ದು ನೀವು ನಿರ್ಲಕ್ಷ್ಯ ತಾಳಿರುತ್ತೀರಿ. ಆದ್ದರಿಂದ ಅವರು ನಿಮಗೆ ವಕೀಲರ ಕಾನೂನು ತಿಳುವಳಿಕೆ ನೋಟೀಸನ್ನು ನಿಮ್ಮ ವಿಳಾಸಕ್ಕೆ ದಿನಾಂಕಃ 23.03.2022 ರಂದು ನೀಡಿದ್ದು, ಆರೋಪಿಯ ಎರಡೂ ವಿಳಾಸಗಳಿಗೆ ನೋಟೀಸು ಜಾರಿಯಾಗಿದ್ದು, ನೀವು ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಪಾವತಿ ಮಾಡಿರುವುದಿಲ್ಲ, ಆದಕಾರಣ ನೀವು ಕಲಂ.138 ಮತ್ತು 142 ಎನ್.ಐ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

5. ನಿಮ್ಮ ಪರವಾಗಿ ಬೇರೆ ಏನಾದರೂ ಹೇಳುವುದು ಇದೆಯೋ?

ಉತ್ತರ ಃ

6. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

(ಮೇಲಿನ ಆರೋಪಿತನ ಹೇಳಿಕೆಯನ್ನು ಓದಿ ಹೇಳಿ, ಆತನು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು. ಅದು ನಿಜ ಮತ್ತು ಸರಿಯಾಗಿದೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕಃ26.08.2023.

**ಅಪರ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ. ಚನ್ನಪಟ್ಟಣ.**